1885ನೇ ಇಸವಿ ಅರ್ಜೀ ನಂಬರ್ 207.

ಮೃತಪಟ್ಟ ಬೆಂಗಳೂರು ಕೋಮಟಿಪೇಟೆ ಕೊತ್ತಾ ನಾರಣಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಕೊತ್ತಾ ಮುನಿಸಾಮಯ್ಯಶೆಟ್ಟಿ, ಮೃತಪಟ್ಟ ಸದರೀ ನಾರಣಪ್ಪನವರಿಗೆ ತಮ್ಮ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಸ್ಥಳದ ಮುನಿಸಾಮಯ್ಯಶೆಟ್ಟಿ, ಬೆಂಗಳೂರು ಕೋಮಟಿ ಪೇಟೆ ವಾಸಸ್ಥರಾಗಿ ಮೃತಪಟ್ಟ ಸದರೀ ನಾರಣಪ್ಪನವರ ಜೆಂದಗಿ ಬ ಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇಆಕ್ಟ್ ಮೇರೆಗೆ ಸರಟಿಫಿಕೇಟ್ ಬ್ಯಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮುನಿಸಾಮಯ್ಯ ಕಟ್ಟಿ ಅರ್ಜೀಯನ್ನು 1885ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 3ರಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾರಣಪ್ಪನ ಆಸ್ತಿಗೆ ಹ ಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಆಗಸ್ಟ್ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1885ನೇ ಇಸವಿ ಅರ್ಜೀ ನಂಬರ್ 260.

ಮೃತಪಟ್ಟ ಚಿಲ್ಲಘಟ್ಟದ ತಾಲ್ಲೂಕು ಚಿಂತಗಂಡ್ಲು ತಿರುಮಲಪ್ಪ ಇವರ ತಮ್ಮ ನಾರಣಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಸುಬ್ಬಾಯಪ್ಪ, ಮೃತಪಟ್ಟ ತಿರುಮಲಪ್ಪ, ನಾರಣಪ್ಪ ಸದರೀ ಸುಬ್ಬಾಯಪ್ಪನಿಗೆ ತಂದೆ ಮತ್ತು ಚಿಕ್ಕಪ್ಪನಾಗಬೇಕೆಂ ಬ ಹಕ್ಕುದಾರಿ ಮೇಲೆ ಚಿಂತಗೆಂಡ್ಲು ಸ್ಥಳದ ಸುಬ್ಬಾಯಪ್ಪನು, ಚಿಂತಗಂಡ್ಲು ವಾಸಸ್ಥರಾಗಿ ಮೃತಪಟ್ಟ ತಿರುಮಲಪ್ಪ, ನಾರಣಪ್ಪನ ಜೆಂದ ಗಿ ಬ್ಯಾಗಿ ಬರತಕ್ಕ ಸೂಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಸುಬ್ಬಾಯಪ್ಪನ ಅರ್ಜೀಯನ್ನು 1885ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿರುಮಲಪ್ಪ, ನಾರಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಜುಲೈ ತಿಂಗಳು 29ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ರೈಸ್,
ಸಬ ಜಡ್ಜ.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 9ನೇ ಜುಲೈ 1885.

ಸ್ಯ 1884—85ನೇ ಇಸವಿಯ ಬಡ್ಡಿ ಪೈಸಲ್ ಬಗ್ಯೆ ತಮ್ಮತಮ್ಮ ಪ್ಯಾಸ್ ಬುಕ್ಕುಗಳನ್ನು ಸಾಧ್ಯವಾದ ಮಟ್ಟಿಗೆ ಜಾಗ್ರತೆಯಲ್ಲಿ ಹಾಜರ್ಮಾಡಬೇಕೆಂದು ಕೋಲಾರ ಡಿಸ್ಟ್ರಿಕ್ಟ ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕ ಡಿಪಾಜಿಟ್‌ದಾರರುಗಳು ಇದರಿಂದ ಕೋರಲ್ಪ ಟ್ಟಿರುತ್ತೆ.

ಎ. ಚಲುವಯ್ಯಂಗಾರ್,
ಟ್ರೆಜರೀ ಆಫಿಸರ.

ತಾರೀಖು 30ನೇ ಜುಲೈ 1885.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಗೋರಿಬಿನೂರು ಸಬ್ ರಿಜಿಸ್ಟ್ರಾರ್ ಆಫಿಸಿನಲ್ಲಿ ಈ ಕೆಳಗೆ ವಿವರಿಸೋ ಣಾದ ರಿಜಿಸ್ಟ್ರಾರ ತಂಸೂಕು ಬೇವಾರಸಾಗಿ ನಿಂತಿರುತ್ತ, ಅದನ್ನ ಹಾಜರ್ಮಾಡಿದವರೆ ಆಗಲಿ ಅದರಲ್ಲಿ ಬಾಧ್ಯತೆ ವುಳ್ಳವರೇ ಆಗಲಿ ಈ ಲಾ ಗಾಯತು 1 ತಿಂಗಳೊಳಗಾಗಿ ಡಿಪೋ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ವಾಜಬಿ ಫೀಜ್ ಪಾವತೀ ಮಾಡಿ ವಾಪಸ್ ಪಡಿಯಬಹು ದು, ತಪ್ಪಿದರೆ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕರ್ಷ ರೀತ್ಯಾ ಅದು ನಾಶಮಾಡಲ್ಪಡುವದು.